ಶ್ರೀರಂಗಪಟ್ಟಣದ ಮ್ಯುನ್ಸೀಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಶ್ರೀರಂಗಪಟ್ಟಣ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಕಡತನಾಳಿನಲ್ಲಿರುವ ಗಂಗಡಿಕಾರ ಲಂಕೆಗೌಡನ ಮಗ ನಡಕೆರಿಗೌಡ ಉರಫ್ ಕೊಂನಾರಿ ಅರ್ಜಿ ವಿಷಯದಲ್ಲಿ—

ಸ॥ 1908—09ನೆ ಇಸವಿ ದಿವಾಳಿ ಕೇಸು ನಂಬರು 391

ಹುಕ್ಕುಂ

ಅರ್ಜಿದಾರ ನಡಕೆರಿ ಗೌಡನು ಮೇಲ್ಕಂಡ ನಂಬರಿನಲ್ಲಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ಈ ಕೋರ್ಟು ರೂಬರೂಬ್ ಅರ್ಜಿದಾರರಾದ ನಡಕೆರಿಗೌಡನ ಪರವಾಗಿ ವಿ॥ ವೆಂಕಟರಾಮಯ್ಯನವರನ್ನು ಮತ್ತು ಸದರೀ ಯವರ ಲೇಣೇದಾರರಾದ 1ನೆ ಚೌಬೀನೆ ಸಿದ್ದಯ್ಯ, 2ನೆ ರಾಜೆಗೌಡ ಉರುಫ್ ಚಿಕ್ಕಹೈದ ಇವರು ಗೈರ್‌ಹಾಜರು ಸಬಬು ದರ್ಖಾಸ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಖಾಸ್ತ್ ನೋಟೀಸು ಜಾರಿಯಾಗಿದ್ದಾಗ್ಯೂ ಖುದ್ದಾಗಿ ಯಾಗಲಿ ಅಥವಾ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಅರ್ಜಿದಾರ ನಡಕೆರಿಗೌಡ ಉರಫ್ ಕೊಂನಾರಿಯು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲ ಕ್ಕೂ ಸ್ಕರವಾಗಿ ಯಾಗಲೀ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಎಂದು ಇದರಿಂದ ಹುಕ್ಕುಂ ಮಾಡಲ್ಪಟ್ಟು ಇರುತ್ತೆ.

ಸ॥ 1909ನೆ ಇಸವಿ ಜನವರಿ 8ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಕೊಬಲಗು.	ಯಾವಾಗ ದಸ್ತಿ ಸ್ಥಾಪಿಸಿದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಪರಾ.
1	ಶ್ರೀರಂಗಪಟ್ಟಣದಲ್ಲಿರುವ ಚೌಬೀನೆ ಸಿದ್ದಯ್ಯನವರ ಮೊಮ್ಮಗ ಸಿದ್ದಯ್ಯ.	ರೂ. ಆ. ಪೈ. 85– 4–11	...	ಈ ಕೋರ್ಟು ಸಿವಿಲ್ 395-05-6ನೆ ನಂಬರು ಡಿಕ್ರಿ ಬಾಬತು.	
2	ಶ್ರೀರಂಗಪಟ್ಟಣದ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಕಡತನಾಳಿನಲ್ಲಿರುವ ರಾಜೆಗೌಡ ಉರಫ್ ಚಿಕ್ಕಹೈದ.	94–13– 9	..	ಸಿವಿಲ್ 1376-04-5ನೆ ನಂಬರು ಡಿಕ್ರಿ ಬಾಬತು.	

ಎಸ್. ಕೃಷ್ಣರಾವ್,
ಮ್ಯುನ್ಸೀಫ್.

ಯಾದಾಸ್ತು ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿಗೆ.

ಮ್ಯುನಿಸಿಪಲ್ ಅಕೌಂಟ್ಸ್ ಆಡೀಟರ್ಸ್ ರಿಪೋರ್ಟು.

ತಾರೀಖು 26ನೆ ನವಂಬರ್ 1908.

ಈ ತಾರೀಖಿನಲ್ಲಿ ಅಕೌಂಟುಗಳು ನೋಡಿದೆವು—ವೋಚರ್ಸು ಬಿಲ್ಲು ಪೇವೆಂಟು ವಗೈರೆ ಲೆಖ್ಕಗಳು ಸರಿಯಾಗಿದೆ.

ಆಕ್ಟ್ರಾಯಿ ವಸೂಲಿ ಗುದಸ್ತಾ ಈ ತಿಂಗಳಿಗೂ ಮಜಕೂರಿಗೂ ಜಾವಳಿ 461 ರೂಪಾಯಿ, ತುಪ್ಪಾ 150 ರೂಪಾಯಿ, ತಂಬಾಕು 83 ರೂಪಾಯಿ, ಕೆರಸನಾಯಲ್ 91 ಈ ಮೇರೆ ಕಮ್ಮಿಯಾಗಿದೆ. ಈ ವರುಷ ದೇವರ ದಯದಿಂದ ಪ್ಲೇಗು ವಗೈರೆ ರೋಗಾದಿಗಳು ಇಲ್ಲದೆ ಇದ್ದರೂ ಕಮ್ಮಿಯಾಗಿರುವದರಿಂದ ಈ ವಿಚಾರ ಸೂಪ್ರವೀಷರ್ ಹೆಚ್ಚಬೇಕಾಗಿದೆ. ವಸೂಲಿಗುದಸ್ತಾ ಕಿಂತ ಜಾಸ್ತಿಯಾಗಿದ್ದರು ಲವಾಜಮಾ ಮಾಹೆಯಾನಾ 140 ರೂಪಾಯಿ ಜಾಸ್ತಿಯಾಗಿರುವದರಿಂದ ಇನ್ನೂ ಹೆಚ್ಚು ವಸೂಲಾಗ ಬೇಕಾಗಿತ್ತು. ಈ ವಿಷಯದಲ್ಲಿ ತೃಪ್ತಿಕರವಾದ ವಿಚಾರಣೆ ಆಗಬೇಕಾಗಿದೆಯಾದ ಮಜಕೂರು ಸೂಚಿಸಿದೆ.

(ಸೈಂಡ್) ಎಂ. ಹುಸೇನ್‌ಅಲ್ಲಿ ಬೇಗ್.
(ಸೈಂಡ್) ಎಂ. ಅನಂತರಾಜಯ್ಯ.